# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸಂ. 174–ಹೆಚ್.ಎಸ್.ಆರ್ ಬಡಾವಣೆ.

## Ward DETER Commitee

ಮಾನ್ಯ ಅಧ್ಯಕ್ಷರು/ನೋಡಲ್ ಅಧಿಕಾರಿ, ಸ.ಕಾ.ನಿ.ಅ. (ಎಸ್.ಡಬ್ಲ್ಯೂ.ಡಿ) ರವರು ದಿನಾಂಕ: 11.06.2021 ರಂದು ಬೆಳಗ್ಗೆ 11:30 ಘಂಟೆಗೆ Ward DETER Commitee ಅನ್ನು 174–ಹೆಚ್.ಎಸ್.ಆರ್ ಬಡಾವಣೆ, ವಾರ್ಡ್ ಕಛೇರಿ (ಹೆಚ್.ಎಸ್.ಆರ್ ಉಪವಿಭಾಗ) ರಲ್ಲಿ ನಡೆಸಿದ್ದ, ವಾರ್ಡ್ ಸಮಿತಿ ಸಭೆಯ ನಡುವಳಿಗಳು.

**ಉಪಸ್ಥಿತರು:**

ಹಾಜರಿದ್ದ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ, ಕಾರ್ಯದರ್ಶಿ, ಸದ್ಯಸರುಗಳು, ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ ಬಿ.ಚಂದ್ರಶೇಖರ್ | ವಾರ್ಡ್ ನೋಡಲ್ ಅಧಿಕಾರಿ ಸ.ಕಾ.ನಿ.ಅ. (ಎಸ್.ಡಬ್ಲ್ಯೂ.ಡಿ) | 9448376415 |
| 2 | ಶ್ರೀ ರಾಮೇಗೌಡ.ಕೆ.ಎಸ್ | ಕಾರ್ಯದರ್ಶಿ, ಸಹಾಯಕ ಅಭಿಯಂತರರು ವಾರ್ಡ್ ಸಂ.174 | 7795356105 |
| 3 | ಶ್ರೀ ಹೆಚ್.ಇ.ಚಂದ್ರಶೇಖರ್ | ಸದ್ಯಸರು | 9880987339 |
| 4 | ಶ್ರೀ ರಾಮಚಂದ್ರ | ಸದ್ಯಸರು | 9845056649 |
| 5 | ಶ್ರೀ ವರಹ ವೆಂಕಟೇಶ್ | ಸ್ವಯಂ ಸೇವಕರು | 988671737 |
| 6 | ಶ್ರೀ ಆರ್ ಕೇಶವ್ ರೆಡ್ಡಿ | ಸ್ವಯಂ ಸೇವಕರು | 9341251360 |
| 7 | ಶ್ರೀ ಟಿ.ಹನುಮಂತರಾಯ | ಸಹಾಯಕ ಕಾರ್ಯನಿರ್ವಹಕ ಅಭಿಯಂತರರು (ಹೆಚ್.ಎಸ್.ಆರ್ ಬಡಾವಣೆ) | 8105005285 |
| 8 | ಶ್ರೀಮತಿ ಡಾ॥ ಎಸ್ ಲಾವಣ್ಯ ಶೆಟ್ಟಿ | ಪ್ರಾ.ಆ.ಕೇಂ (ವೈದ್ಯರು) | 8971042985 |
| 9 | ಶ್ರೀಮತಿ ಲಕ್ಷ್ಮೀ ಬಿ | ಸಹಾಯಕ ಕಂದಾಯ ಅಧಿಕಾರಿ | 7892757079 |
| 10 | ಶ್ರೀ ವಿನೋದ್.ಜಿ | ಹಿ.ಆ.ಪ ವಾ.ಸಂ: 174 | 9844629911 |
| 11 | ಶ್ರೀಮತಿ ಸತ್ಯವಾಣಿ.ಎಂ | ಕಿ.ಆ.ಪ ವಾ.ಸಂ: 174 | 8971434331 |
| 12 | ಶ್ರೀ ಎನ್ ಮಂಜುನಾಥ್ | ಮೌಲ್ಯಮಾಪಕರು/ Presiding Officer ವಾ.ಸಂ: 174 | 9945074187 |
| 13 | ಶ್ರೀ ನಂಜೇಶ್ | ಕಂದಾಯ ನಿರೀಕ್ಷಕರು | 9902904007 |

Scanned with

* ವಾರ್ಡ್ ಅಧ್ಯಕ್ಷರು/ನೋಡಲ್ ಅಧಿಕಾರಿರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರನ್ನು ಸದಸ್ಯರು ಹಾಗೂ ಸ್ವಯಂ ಸೇವಕರನ್ನು ಸಭೆಗೆ ಸ್ವಾಗತಿಸುತ್ತಾ, ಹಿಂದಿನ ಸಭಾ ನಡವಳಿಯ ಪ್ರತಿ ಅಂಶದ ಬಗ್ಗೆ ಚರ್ಚಿಸಲಾಗಿದ್ದು ವಾರ್ಡ್ ವ್ಯಾಪ್ತಿಯಲ್ಲಿ ಸದ್ಯಸರು, ಸ್ವಯಂ ಸೇವಕರು ಮತ್ತು ಅಧಿಕಾರಿಗಳ ಸಹಾಕರದೊಂದಿಗೆ ರಸ್ತೆಗಳಲ್ಲಿ Sanitasation & Spraying ಔಷಧಿ ಸಿಂಪಡಿಸುವ ಕಾರ್ಯಕ್ರಮ, Testing, Tracing and Vaccination ಸಂಪರ್ಕವಾಗಿ ಸ್ಟಾಕ್ ಲಭ್ಯತೆ ಅನುಗುಣವಾಗಿ ಲಸಿಕೆ ನೀಡಲಾಗುತ್ತಿದ್ದು, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ಸಭೆಯಲ್ಲಿ ಧನ್ಯವಾದಗಳು ತಿಳಿಸುತ್ತಾ ಕೋವಿಡ್-19 ಹರಡುವಿಕೆಯು ಈ ವಾರ್ಡ್‌ನಲ್ಲಿ ಇಳಿಮುಖವಾಗಿದೆ ಎಂದು ತಿಳಿಸಿರುತ್ತಾರೆ.
* ಶ್ರೀಮತಿ ಡಾ|| ಎಸ್ ಲಾವಣ್ಯ ಶೆಟ್ಟಿ ರವರು ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಸೋಂಕಿತರ ಪ್ರಕರಣವನ್ನು ವಿವರಿಸುತ್ತಾ ಕಳೆದ 10 ದಿನಗಳಲ್ಲಿ ಒಟ್ಟು 123 ಪ್ರಕರಣಗಳು ವರದಿಯಾಗಿರುವುದಾಗಿ ಸಭೆಗೆ ತಿಳಿಸಿದ್ದರು.
* ವಾರ್ಡ್ 174 ಹೆಚ್.ಎಸ್ ಆರ್ ಬಡಾವಣೆಯ ಅಗರ ಸರ್ಕಾರಿ ಶಾಲೆಯ ಬಳಿ 45 ವರ್ಷ ಮೇಲ್ಪಟ್ಟವರಿಗೆ 1ನೇ & 2ನೇ ಡೋಸ್ ಕೋವಿಡ್ ಲಸಿಕೆಯನ್ನು ನೀಡಲಾಗುತ್ತಿದೆ ಎಂದು ಶ್ರೀಮತಿ ಡಾ|| ಎಸ್ ಲಾವಣ್ಯ ಶೆಟ್ಟಿ ರವರು ಸಭೆಗೆ ತಿಳಿಸಿದರು.
* Covaxin 1ನೇ ಡೋಸ್ ಕೋವಿಡ್ ಲಸಿಕೆಯನ್ನು ಪಡೆದುಕೊಂಡವರಿಗೆ 45 ದಿನಗಳು ಮತ್ತು Covishield 1ನೇ ಡೋಸ್ ಕೋವಿಡ್ ಲಸಿಕೆಯನ್ನು ಪಡೆದುಕೊಂಡವರಿಗೆ 84 ದಿನಗಳ ಆದಾ ನಂತರ ತಮ್ಮ ದೂರವಾಣಿ ಸಂಖ್ಯೆಗೆ ಸಂದೇಶವನ್ನು ಕಳುಹಿಸಲಾಗುವುದೆಂದು ಡಾ|| ಎಸ್ ಲಾವಣ್ಯ ಶೆಟ್ಟಿ ರವರು ಸಭೆಗೆ ತಿಳಿಸಿದರು.
* Covaxin ಮತ್ತು Covishield 2ನೇ ಡೋಸ್ ಕೋವಿಡ್ ಲಸಿಕೆಯನ್ನು ಪಡೆದ ನಂತರ ಎಷ್ಟು ತಿಂಗಳೂವರಿಗೆ ಸಿಂಧುತ್ವ ಅವಧಿ ಇರಬೇಕು ಎಂದು ಶ್ರೀ ಹೆಚ್.ಇ.ಚಂದ್ರಶೇಖರ್ ಮತ್ತು ಶ್ರೀ ರಾಮಚಂದ್ರ, ಸದ್ಯಸರು ಕೋರಿದ್ದು, ಈ ಬಗ್ಗೆ ವೈದ್ಯರಾದ ಡಾ|| ಎಸ್ ಲಾವಣ್ಯ ಶೆಟ್ಟಿ ರವರು 1 ವರ್ಷದವರೆಗೂ ಸಿಂಧುತ್ವ ಅವಧಿ ಇರುತ್ತದೆ ಎಂದು ಸಭೆಗೆ ತಿಳಿಸಿದರು.
* ಹಿಂದಿನ ಸಭೆಯಲ್ಲಿ ಶ್ರೀ ರಾಮಚಂದ್ರ, ಸದ್ಯಸರ ರವರು ಪರಂಗಿಪಾಳ್ಯದಲ್ಲಿ ಕೋವಿಡ್-19 ಪ್ರಕರಣವಿದ್ದು, ಸದರಿ ಪ್ರದೇಶಲ್ಲಿ Testing Camp ಏರ್ಪಡಿಸಲು ಕೋರಿದ್ದು, ಈ ಬಗ್ಗೆ ವೈದ್ಯರು ಮತ್ತು ಹಿರಿಯ ಆರೋಗ್ಯ ಪರಿವೀಕ್ಷಕರು Testing Camp ಆಯೋಜಿಸಲಾಗಿರುತ್ತದೆ ಎಂದು ಸಭೆಗೆ ತಿಳಿಸಿದ್ದರು.
* ಸದರಿ ವಾರ್ಡ್‌ನಲ್ಲಿ ಒಟ್ಟಾರೆ ಡಿಸೆಂಬರ್-19 ರಿಂದ ಇಲ್ಲಿಯವರೆಗೂ ಎಷ್ಟು ಜನಸಂಖ್ಯೆ ಕೋವಿಡ್-19 ರಿಂದ ಮರಣ ಹೊಂದಿರುವ ದಾಖಲೆಗಳು, ಸೋಂಕಿತರ ವಿವರ ಮತ್ತು ವಿಳಾಸಗಳನ್ನು ಸಲ್ಲಿಸಲು ವೈದ್ಯರಿಗೆ ಶ್ರೀ ಹೆಚ್.ಇ.ಚಂದ್ರಶೇಖರ್ ಮತ್ತು ಶ್ರೀ ರಾಮಚಂದ್ರ ರವರು ಕೋರಿದ್ದು, ಕೂಡಲೇ ಸಲ್ಲಿಸುವುದಾಗಿ ವೈದ್ಯರು ತಿಳಿಸಿರುತ್ತಾರೆ.
* ವಾರ್ಡ್ ಸಭೆಗೆ ಹಾಜರಾದ್ದ, ಸದಸ್ಯರು ಮತ್ತು ಸ್ವಯಂ ಸೇವಕರುಗಳು ಲಸಿಕೆ ಸ್ಟಾಕ್‌ನ್ನು 18-44 ವಯ್ಯಸಿನವರಿಗೆ ಲಸಿಕೆ ಸ್ಟಾಕ್‌ನ್ನು ನೀಡಲು ವೈದ್ಯರಿಗೆ ಸಭೆಯಲ್ಲಿ ಕೋರಿದರು. ಈ ಬಗ್ಗೆ ಸರ್ಕಾರದ ಆಯ್ದ ಆದ್ಯತೆ ಗುಂಪುಗಳಿಗೆ ದೈನಂದಿನ ವಾರ್ಡ್‌ವಾರು ಕ್ಯಾಂಪ್‌ನ್ನು ಹಮ್ಮಿಕೊಂಡು ಲಸಿಕೆ ನೀಡಲಾಗುತ್ತಿದೆ ಎಂದು ಡಾ|| ಎಸ್ ಲಾವಣ್ಯ ಶೆಟ್ಟಿ ರವರು ಸಭೆಗೆ ತಿಳಿಸಿದರು.
* ವಾರ್ಡ್ ವ್ಯಾಪ್ತಿಯಲ್ಲಿ ಏಳ್ಳುಕುಂಟೆ ಗ್ರಾಮ, ಗುಂಡ್‌ತೋಪ್, ಅಗರ ಗ್ರಾಮ, ಇಬ್ಬಲೂರು ಗ್ರಾಮ ದಲ್ಲಿ ಲಸಿಕೆ ಕೇಂದ್ರ ಮಾಡಲು ಶ್ರೀ ಹೆಚ್.ಇ.ಚಂದ್ರಶೇಖರ್ ಮತ್ತು ಶ್ರೀ ರಾಮಚಂದ್ರ ರವರು ಕೋರಿದ್ದು, ಈ ಬಗ್ಗೆ ಸರ್ಕಾರದ ಆಯ್ದ ಆದ್ಯತೆ ಗುಂಪುಗಳಿಗೆ ದೈನಂದಿನ ವಾರ್ಡ್‌ವಾರು ಕ್ಯಾಂಪ್‌ನ್ನು ಹಮ್ಮಿಕೊಂಡು ಲಸಿಕೆ ನೀಡಲಾಗುತ್ತಿದ್ದು ಕ್ರಮ ವಹಿಸುವುದಾಗಿ ಡಾ|| ಎಸ್ ಲಾವಣ್ಯ ಶೆಟ್ಟಿ ರವರು ಸಭೆಗೆ ತಿಳಿಸಿದರು.
* ಕೋವಿಡ್-19 3ನೇ ಅಲೆಯು ಅಗಸ್ಟ್, ಸೆಪ್ಟೆಂಬರ್ ರಿಂದ ಉಲ್ಭಾಣವಾಗುವುದೆಂದು ತಜ್ಞರ ಅಭಿಪ್ರಾಯದಂತೆ ಮಕ್ಕಳ ಮೇಲೆ ಪರಿಣಾಮವನ್ನು ತಡೆಯಲು ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಆರೈಕೆ ಕೇಂದ್ರಗಳನ್ನು ಹೆಚ್ಚಾಗಿ ನಿರ್ಮಿಸಲು ವಾರ್ಡ್ ಸದ್ಯಸರಾದ ಶ್ರೀ ಹೆಚ್.ಇ.ಚಂದ್ರಶೇಖರ್ ಮತ್ತು ಶ್ರೀ ರಾಮಚಂದ್ರ ರವರು ಕೋರಿದ್ದು, ಈ ಬಗ್ಗೆ ವೈದ್ಯರಾದ ಡಾ|| ಎಸ್ ಲಾವಣ್ಯ ಶೆಟ್ಟಿ ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರು AiiMs ಸಂಸ್ಥೆರವರು ಇದರ ಬಗ್ಗೆ ಸಂಶೋಧನೆ ಮಾಡಲಾಗುತ್ತಿದೆ ಎಂದು ತಿಳಿಸಿದರು.
* ವಾರ್ಡ್ ವ್ಯಾಪ್ತಿಯ ಪರಂಗಿಪಾಳ್ಯದಲ್ಲಿ ಹೊಸದಾಗಿ ಚರಂಡಿ ಕಲ್ವರ್ಟ್ ಮತ್ತು ಡಾಂಬರೀಕರಣ ಕಾಮಗಾರಿ ನಿರ್ವಹಿಸಲು ಸದಸ್ಯರು ಕೋರಿರುತ್ತಾರೆ. ಈ ಬಗ್ಗೆ ಕ್ರಿಯಾಯೋಜನೆ ತಯಾರಿಸಿದ್ದು, ಕಾರ್ಯದೇಶ ನೀಡಿದ ನಂತರ ಕ್ರಮ ಕೈಗೊಳ್ಳಲಾಗುವುದೆಂದು ಸ.ಅ. ರವರು ತಿಳಿಸಿದರು.

Scanned with

- ವಾರ್ಡ್ ವ್ಯಾಪ್ತಿಯ ಚರಂಡಿಗಳಲ್ಲಿ ಹೂಳೆತ್ತಲು ಕ್ರಿಯಾಯೋಜನೆ ಸಿದ್ಧಪಡಿಸಿ ಸೆಕ್ಟರ್‌ವಾರು ಸ್ವಚ್ಛಗೊಳಿಸುವಂತೆ ಸದಸ್ಯರು ಸಭೆಯಲ್ಲಿ ಕೋರಿರುತ್ತಾರೆ. ಈ ಬಗ್ಗೆ ಕ್ರಮ ಕೈಗೊಳಲಾಗುವುದೆಂದು ಸ.ಅ ರವರು ಸಭೆಗೆ ತಿಳಿಸಿದರು.
- ಮಳೆಗಾಲದ ಅವಧಿ ಜೂನ್ ಮಾಹೀಯಿಂದ ಪ್ರಾರಂಭವಾಗಿರುವುದರಿಂದ ತುರ್ತು ಹಾಗೂ ಅವ್ಯಶಕವಿರುವ ಕಾಮಗಾರಿಗಳಾದ ರಸ್ತೆ ಬದಿಯಲ್ಲಿರುವ ಚರಂಡಿಗಳಲ್ಲಿ ತುಂಬಿರುವ ಹೂಳು ತೆಗೆಯುವುದು, ಪಾದಚಾರಿ ಮಾರ್ಗಗಳಲ್ಲಿ ಅನಗತ್ಯ ವಸ್ತುಗಳನ್ನು ತೆಗೆಯುವುದು, ಘನತ್ಯಾಜ್ಯ ವಸ್ತುಗಳನ್ನು, ಕಲ್ವರ್ಟ್‌ಗಳ ನಿರ್ವಹಣೆ, ಬೃಹತ್ ನೀರುಗಾಲುವೆಗಳಲ್ಲಿ ಹೂಳು ತೆಗೆಯುವುದು ಮರಗಳಲ್ಲಿ ಒಣಗಿರುವ ರಂಬೆಗಳು, ಎಲೆಗಳು ಹಾಗೂ ಆಕಾಲಿಕ ಮಳೆಯ ಹಿನ್ನಲೆಯಲ್ಲಿ ಅಗತ್ಯ ಸೌಲಭ್ಯದೊಂದಿಗೆ ಸ್ಥಾಪಿಸಿ ಕಾರ್ಯ ನಿರ್ವಹಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಶ್ರೀ ಹೆಚ್.ಇ.ಚಂದ್ರಶೇಖರ್ ಮತ್ತು ಶ್ರೀ ರಾಮಚಂದ್ರ, ಸದ್ಯಸರು ವಾರ್ಡ್ ಗಮನಕ್ಕೆ ತಂದಿದ್ದು, ಈ ಬಗ್ಗೆ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರು ಈಗಾಗಲೇ ಕಾರ್ಯಪಾಲಕ ಅಭಿಯಂತರರು (ಬೊಮ್ಮನಹಳ್ಳಿ ವಿಭಾಗ) ರವರು ಗುತ್ತಿಗೆದಾರರಿಗೆ ಕಾರ್ಯದೇಶವನ್ನು ನೀಡಿದ್ದು ಕ್ರಮ ಕೈಗೊಳಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.
- ವಾರ್ಡ್ ವ್ಯಾಪ್ತಿಯ 27ನೇ ಮುಖ್ಯ ರಸ್ತೆ, 24ನೇ ಮುಖ್ಯ ರಸ್ತೆ, 19ನೇ ಮುಖ್ಯ ರಸ್ತೆ ಇಬ್ಬಲೂರು ರಿಂಗ್ ರಸ್ತೆಯಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಒಳಚರಂಡಿ ಪೈಪ್ ಲೈನ್ ಕಾಮಗಾರಿಯನ್ನು ಕೈಗೆತಿಕೊಂಡು ರಸ್ತೆಗಳನ್ನು ಅಗೆದಿದ್ದು ಮತ್ತು ಬೆಸ್ಕಾಂ ವಿಭಾಗದವರು ಯು.ಜಿ ಕೇಬಲ್ / ಟ್ರಾನ್ ಫಾರ್ಮರ್ ದುರಸ್ಥಿ ಪಡಿಸುವ ಸಲುವಾಗಿ ಕಾಮಗಾರಿಯನ್ನು ಕೈಗೆತಿಕೊಂಡು ರಸ್ತೆಗಳನ್ನು ಅಗೆದಿದ್ದು ಸಾರ್ವಜನಿಕರಿಗೆ ಮತ್ತು ಸಂಚಾರಕ್ಕೆ ತೊಂದರೆಯಾಗುತ್ತಿದೆ ಎಂದು ಶ್ರೀ ಹೆಚ್.ಇ.ಚಂದ್ರಶೇಖರ್ ಮತ್ತು ಶ್ರೀ ರಾಮಚಂದ್ರ, ಸದ್ಯಸರು ವಾರ್ಡ್ ಗಮನಕ್ಕೆ ತಂದಿದ್ದು, ಈ ಬಗ್ಗೆ ಸಭೆಗೆ ಗೈರ್ ಹಾಜರಾದ ಶ್ರೀ ಸಾಯಿಬಣ್ಣ, ಸ.ಅ ಬಿ.ಡಬ್ಲ್ಯೂ.ಎಸ್.ಎಸ್.ಬಿ ಮತ್ತು ಶ್ರೀ ಯತೀಶ್ ಸ.ಅ ಬೆಸ್ಕಾಂ ರವರಿಗೆ ನೋಡಲ್ ಅಧಿಕಾರಿ ರವರು ಕಾರ್ಯದರ್ಶಿ ರವರಿಗೆ ಮುಂದಿನ ಸಭೆಗೆ ಹಾಜರಾಗುವಂತೆ ಸೂಚಿಸಿದ್ದರು.
- ವಾರ್ಡ್ ವ್ಯಾಪ್ತಿಯಲ್ಲಿ ಅನಧಿಕೃತವಾಗಿ ಪಾದಚಾರಿ ಮಾರ್ಗದಲ್ಲಿ ಇರುವ ಟೀ ಸ್ಟಾಲ್, ಖಾಲಿ ನಿವೇಶನದಲ್ಲಿ ಕುಡಿಯುವ ನೀರಿನ ಸಂಪರ್ಕ ಮತ್ತು ವಿದ್ಯುತ್ ಸಂಪರ್ಕವನ್ನು ಪಡೆದುಕೊಂಡಿರುವವರನ್ನು ಪತೆ ಮಾಡಿ ಸ್ಥಗಿತಕೊಗಳಲು ಶ್ರೀ ಹೆಚ್.ಇ.ಚಂದ್ರಶೇಖರ್ ಮತ್ತು ಶ್ರೀ ರಾಮಚಂದ್ರ, ಸದ್ಯಸರು ವಾರ್ಡ್ ಗಮನಕ್ಕೆ ತಂದಿದ್ದು, ಈ ಬಗ್ಗೆ ಕ್ರಮಕೈಗೊಳಲು ಅಧ್ಯಕ್ಷರು / ನೋಡಲ್ ಅಧಿಕಾರಿರವರು ಸಂಬಂಧಪಟ್ಟ ಸ.ಅ ರವರಿಗೆ ಸೂಚಿಸಿದರು.

| | |
|---|---|
| ಕಾರ್ಯದರ್ಶಿ, ವಾರ್ಡ್ ನಂ.174ರ<br>ಸಹಾಯಕ ಅಭಿಯಂತರರು<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ | ಅಧ್ಯಕ್ಷರು/ನೋಡಲ್ ಅಧಿಕಾರಿ<br>ಸಹಾಯಕ ಕಾರ್ಯಪಾಲಕ ಅಭಿಯಂತರರು<br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ |

**ಪ್ರತಿಯನ್ನು:-**

1) ಮಾನ್ಯ ಆಡಳಿತಗಾರರು, ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ಸಲ್ಲಿಸಿದೆ
2) ಮಾನ್ಯ ಮುಖ್ಯ ಆಯುಕ್ತರು, ಬಿ.ಬಿ.ಎಂ.ಪಿ.ರವರ ಅವಗಾಹನೆಗಾಗಿ ಸಲ್ಲಿಸಿದೆ.
3) ಮಾನ್ಯ ವಲಯ ಆಯುಕ್ತರು, ಬೊಮ್ಮನಹಳ್ಳಿ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ
4) ಮಾನ್ಯ ವಿಶೇಷ ಆಯುಕ್ತರು, (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5) ಜಂಟಿ ಆಯುಕ್ತರು (ಬೊಮ್ಮನಹಳ್ಳಿ ವಲಯ) ರವರ ಅವಗಾಹನೆಗಾಗಿ ಸಲ್ಲಿಸಿದೆ
6) ವಾರ್ಡ್ ಸಮಿತಿಯ ಸದಸ್ಯರ / ಸ್ವಯಂ ಸೇವಕರ ಮಾಹಿತಿಗಾಗಿ ಸಲ್ಲಿಸಿದೆ.
7) ಕಛೇರಿ ಪ್ರತಿ.

Scanned with